# ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

## CC No. 244/2018

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜೇಶ್ ಬಿ |
| ತಂದೆಯ ಹೆಸರು | : | ಬೀರೇಶ್ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಎಲೆಕೇರಿ, ಚನ್ನಪಟ್ಟಣ. |

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ : ದಿಃ 26.03.2026

ಚಾಸಾ-1 ಮತ್ತು ಚಾಸಾ-5 ನನಗೆ ಗೊತ್ತಿಲ್ಲ. ಆರೋಪಿತರು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಸ್ಥಳ ಮಹಜರ್ ಮಾಡಿಲ್ಲ, ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಾನು ಪೊಲೀಸ್ ಠಾಣೆಗೆ ಪಾಸ್ ಪೋರ್ಟ್ ಮಾಡಿಸಲು ಪೊಲೀಸ್ ವೆರಿಫಿಕೇಷನ್ ಗೆ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಒಂದು ಹಾಳೆ ಮೇಲೆ ಸಹಿ ಮಾಡಲು ಕೋರಿದ ಕಾರಣ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿ ಮಾಡಿದ ದಾಖಲೆ ಪಂಚನಾಮೆ ಆಗಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ತೀರ್ಮಾನಿಸಿ ಅಭಿಯೋಜಕರ ಕೋರಿಕೆಯ ಮೇರೆಗೆ ಪಾಟೀ ಸವಾಲುಗೆ ಅನುಮತಿಸಲಾಯಿತು. ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ-**

ದಿ 20.06.2017 ರಂದು ಚಾಸಾ-1 ಮತ್ತು ಆರೋಪಿತರ ನಡುವೆ ಆದ ಗಲಾಟೆ ಸಂಬಂಧ ದಿನಾಂಕ 21.06.2017ರಂದು ಪೊಲೀಸರು ನನ್ನ ಹಾಗೂ ಚಾಸಾ-5ರವರ ಸಮಕ್ಷಮ ಚನ್ನಪಟ್ಟಣ ಟೌನ್ ತಟ್ಟಕೆರೆ ತಮಿಳು ಕಾಲೋನಿ ಎದುರು ಚಾಸಾ-2 ಧರ್ಮರ್ ರವರ ಮನೆಯ ಬಳಿ ಸ್ಥಳ ಪಂಚನಾಮೆ ಕ್ರಮ ಜರುಗಿಸಿ ನನ್ನ ಮತ್ತು ಚಾಸಾ-5ರವರ ಸಮಕ್ಷಮ ಒಂದು ಇಟ್ಟಿಗೆ ಮತ್ತು ಒಂದು ಚಾಕನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಘಟನೆ ನಡೆದ ಸ್ಥಳದಲ್ಲೇ ಸಹಿ ಮಾಡಿ ಅದರಲ್ಲಿರುವ ವಿಷಯಗಳನ್ನು ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲೆ ಪಂಚನಾಮೆಯನ್ನು ಪೊಲೀಸರು ಜರುಗಿಸಿದ್ದರು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದು ಹಾಗೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**ಆರೋಪಿ ಪರ ಶ್ರೀಎಂ ಕೆ ಎನ್ ಪರವಾಗಿ ಕುಮಾರಿ ಸಿ ಎಸ್ ಡಿ ವಕೀಲರಿಂದ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.